ಊ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ತೋಟಗಾರಿಕೆ ಕ್ಷೇತ್ರಗಳ ಅಭಿವೃದಿಗೆ 1998-99ನೇ ಸಾಲಿನಲ್ಲಿ ಒಟ್ಟು ರೂ.6.65 ಲಕ್ಷ ಅನುದಾನವನ್ನು ವಿನಿಯೋಗಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅವುಗಳಲ್ಲಿ ಕ್ಷೇತ್ರಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವುದು ಹಾಗೂ ಕ್ಷೇತ್ರಕ್ಕೆ ಬೇಕಾಗುವ ಕಾಮಗಾರಿ ಕಾರ್ಯಗಳನ್ನು ಕೈಗೊಳ್ಳಲಾಗುವುದು.

ಅಂಕೋಲದಲ್ಲಿ ಬಸ್ ಡಿಪೋ.

2838: (3767)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1996-97, 1997-98ಕ್ಕೆ ಒಟ್ಟು ಮಂಜೂರಾದ ಡಿಪೋಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಉತ್ತರಕನ್ನಡಜಿಲ್ಲೆಯ ಅಂಕೋಲದಲ್ಲಿ ಡಿಪೋ ಮಾಡುವ ವಿಚಾರ ಯಾವ ಹಂತದಲ್ಲಿದೆ?

ಇ) ಅದನ್ನು ಜರೂರಾಗಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು 1996-97ನೇ ಸಾಲಿನಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಬಸ್ ಡಿಪೋಗಳಿಗೆ ಮಂಜೂರಾತಿಯನ್ನು ನೀಡಲಾಗಿರುತ್ತದೆ.

1. ಶ್ರೀನಿವಾಸಪುರ (ಕೋಲಾರ ಜಿಲ್ಲೆ)
2. ಬಾಗೇಪಲ್ಲಿ (ಕೋಲಾರ ಜಿಲ್ಲೆ)
3. ವಿಶ್ವೇಶ್ವರನಗರ ಸಾರಿಗೆ (ಬೆಂಗಳೂರು ನಗರ ಜಿಲ್ಲೆ)
4. ದೊಡ್ಡಬಳ್ಳಾಪುರ (ಬೆಂಗಳೂರು ಗ್ರಾಮಾಂತರಜಿಲ್ಲೆ))
5. ರಾಣೆಬೆನ್ನೂರು (ತಾತ್ಕಾಲಿಕ) (ಧಾರವಾಡಜಿಲ್ಲೆ)
6. ಬಿಜಾಪುರ (ಮಿನಿ ಬಸ್ ಘಟಕ) (ಬಿಜಾಪುರ ಜಿಲ್ಲೆ)

1997-98ನೇ ಸಾಲಿನಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಬಸ್ ಡಿಪೋಗಳಿಗೆ ಮಂಜೂರಾತಿಯನ್ನು ನೀಡಲಾಗಿರುತ್ತದೆ.

1. ಕೋರಮಂಗಲ (ನಗರ ಸಾರಿಗೆ ಘಟಕ) (ಬೆಂಗಳೂರು ನಗರ ಜಿಲ್ಲೆ)

2. ಸಾಣೇಗುರುವನಹಳ್ಳಿ (") (")

3. ಕಿಂಕೋ ಕಾರ್ಯಾಗಾರವನ್ನು ನಗರ ಸಾರಿಗೆ ಬಸ್ ಘಟಕವನ್ನಾಗಿ ಪರಿವರ್ತಿಸುವುದು. (ಬೆಂ.ನಗರ ಜಿಲ್ಲೆ)

4. ಹುಣಸೂರು (ಮೈಸೂರು ಜಿಲ್ಲೆ)

5. ಸಿರಗುಪ್ಪ (ಬಳ್ಳಾರಿ ಜಿಲ್ಲೆ)

6. ರಾಯಚೂರು (ಎರಡನೇ ಘಟಕ) (ರಾಯಚೂರು ಜಿಲ್ಲೆ)

ಆ) ಉತ್ತರ ಕನ್ನಡ ಜಿಲ್ಲೆಯ ಅಂಕೋಲದಲ್ಲಿ 1999-2000ನೇ ಸಾಲಿನಲ್ಲಿ ಬಸ್ ಘಟಕ ನಿರ್ಮಿಸಲು ಯೋಜಿಲಾಗಿದೆ. ಬಸ್ ಘಟಕ ನಿರ್ಮಿಸಲು ಅಂಕೋಲ ತಾಲ್ಲೂಕಿನ ಹೊಸಗಡ್ಡ ಗ್ರಾಮದ ಸರ್ವೆ ನಂಬರ್ 2ಎ, 1ಬಿ ನಲ್ಲಿ ಜಿಲ್ಲಾಧಿಕಾರಿಗಳು 5 ಎಕರೆ ಜಾಗದ ಮಂಜೂರು ಮಾಡಿದ್ದು ಇದರ ವಿರುದ್ಧ ಅಂಕೋಲ ಕೆನರಾ ವೆಲ್‌ಫೇರ್ ಅಸೋನಿಯೇಷನ್‌ರವರು ರಾಜ್ಯ ಉಚ್ಚ ನ್ಯಾಯಾಲಯದಿಂದ ತಡೆ ಆಜ್ಞೆ ತಂದಿರುತ್ತಾರೆ.

ಇ) ತಡೆ ಆಜ್ಞೆ ತೆರವುಗೊಳಿಸಿದ ನಂತರ ಬಸ್ ಘಟಕ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಮನೆಗಳ ಹಂಚಿಕೆ.

2844: (3808)

: ಶ್ರೀ ಎಸ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಮಹಾನಗರ ಪಾಲಿಕೆ ಮರಕಟ್ಟೆ, ಬೊಂದೇಲದಲ್ಲಿ ಹಂಚಿಕೆಯಾದ ಮನೆಗಳ ನಿವಾಸಿಗಳಿಗೆ ಹುಡ್ಕೋ ನಾರಮ್ಸ್ ಪ್ರತಿ ಕೊಡದಿರಲು ಕಾರಣವೇನು?